ಘೋಷಣೆ ಮಾಡದಂತೆ ತಾವು ಒಂದು ಆದೇಶವನ್ನು ಹೊರಡಿಸಿದರೆ ನನಗೆ ಈ ಒಂದು ಪ್ರಶ್ನೆ ಕೇಳಿದ್ದಕ್ಕೆ ತೃಪ್ತಿಯಾಗುತ್ತದೆಂದೂ ಹೇಳುತ್ತೇನೆ.

ಅಧ್ಯಕ್ಷರು.—ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಈಗ ಈಶ್ವರಪ್ಪನವರು ಕೇಳಂತ್ತಾರೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಅಧ್ಯಕ್ಷರೇ, ಈ ರೀತಿ ಮರು ಸರ್ವೆ ಮಾಡುತ್ತೇವೆಂದು ಹಿಂದೆ ಕೂಡ ಆದೇಶ ಕೊಟ್ಟಿದ್ದರು. ಆದರೆ ಅದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಬುಲ್ಡೋಜರ್ ತೆಗೆದುಕೊಂಡು ಹೋಗಿ ಬಡರೈತರು ಏನು ಬಗರ್ ಹುಕುಂ ಮಾಡುತ್ತಿದ್ದ ಸಂದರ್ಭದಲ್ಲಿ ಗುಂಡಿಗಳನ್ನು ತೆಗೆದು ನೀಲಗಿರಿ ಮರಗಳನ್ನು ನೆಡುವಂಥ ಪ್ರಯತ್ನ ನಡೆಯಿತು. ಆ ಸಂದರ್ಭದಲ್ಲಿಯೂ ಕೂಡ ಈ ರೀತಿ ಆರ್ಡರ್ ಮಾಡಿದ್ದರೂ ಕೂಡ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮಾಡುತ್ತಿರುವ ಪ್ರಯತ್ನವನ್ನು ತಮ್ಮ ಗಮನಕ್ಕೆ ತಂದು ಇಷ್ಟೇ ಪ್ರಯತ್ನ ಮಾಡಿದರೂ ಅವರ ಕೆಲಸವನ್ನು ನಿಲ್ಲಿಸಲಿಲ್ಲ. ಈ ಸಂದರ್ಭದಲ್ಲಿ ಸರ್ಕಾರದ ಆರ್ಡರ್ ತೆಗೆದುಕೊಂಡು ಹೋಗಿ ಇಬ್ಬರೂ ಕೂಡ, ಗಮನಹರಿಸಬೇಕಾದ ಸಂದರ್ಭದಲ್ಲಿ ಬುಲ್ಡೋಜರ್ ತೆಗೆದುಕೊಂಡು ಬರುತ್ತಿದ್ದ ಅಧಿಕಾರಿಗಳಿಗೆ ಆ ಬಡ ರೈತರು ಎಚ್ಚರಿಕೆಯನ್ನು ಕೊಟ್ಟು, ನೀವೇನಾದರೂ ನಮ್ಮ ಹತ್ತಿರ ಬಂದರೆ ನಿಮ್ಮನ್ನು ಈ ಗುಂಡಿಯಲ್ಲಿ ಮುಚ್ಚುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ತರಹ ಕೈಏರಿ ಕೃತ್ಯ ಕೈಮೀರಿ ಹೋಗುವ ಮುಂಚೆ ತಕ್ಷಣ ಸರ್ವೆ ಮಾಡಿಸಿಕೊಡಬೇಕು, ಸರ್ಕಾರ ಇದಕ್ಕೆ ಸಮಯವನ್ನು ಕೂಡ ನಿಗದಿ ಮಾಡಬೇಕೆಂದು ಅಧ್ಯಕ್ಷರ ಮೂಲಕ ಒತ್ತಾಯ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಕಡತದ ಪ್ರಕಾರ ಏನೇನು ಕಿ ಆರ್ಡ್ ಡಿ ಲ್ಯಾಂಡ್ಸ್ ಇದೆ, ಅದೆಲ್ಲಾ ವರ್ಗಾವಣೆ ಆಗಿದೆ ಆನ್ ಪೇಪರ್. ಅದರಲ್ಲಿ ವರ್ಗಾವಣೆ ಆಗಬೇಕಾದ್ದು ಆಗದೇ ಇರುವ ಪ್ರಶ್ನೆಯೇ ಇಲ್ಲ. ಆದರೆ ಸರ್ಕಾರ ಒಂದು ವಿಚಾರದಲ್ಲಿ ಸಂಪೂರ್ಣವಾಗಿ ಮನಗಂಡಿದೆ, ಏನೆಂದರೆ ಎಲ್ಲಿಲ್ಲಿ ಇದು ಉಳುವೆಗೆ ಅಥವಾ ಸಾಗುವಳಿಗೆ ಅನುಕೂಲವಾಗಿದೆ, ಎಲ್ಲಿ ಫಾರೆಸ್ಟ್ ಇಲಾಖೆ ಅದನ್ನು ಡೆವಲಪ್‌ಮೆಂಟ್ ಮಾಡಿಲ್ಲ, ಆ ಪ್ರದೇಶವನ್ನು ವಿಂಗಡಿಸತಕ್ಕಂಥ ಒಂದು ಉದ್ದೇಶದಿಂದಲೇ ಈ ಕ್ರಾಪ್ ಸರ್ವೆ ಟೀಮನ್ನು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ವಿೂಸಲು ಅರಣ್ಯಕ್ಕೆ ನೋಟಿಫಿಕೇಷನ್ ಬಹಳ ಆತುರಾತುರವಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆಂದು ಏನು ಹೇಳಿದರು, ಇದು ಅಷ್ಟು ದೂರ ಹೋಗುವುದಿಲ್ಲ. ಏಕೆಂದರೆ, ಇದನ್ನು ಎಲ್ಲಿ ಅರಣ್ಯ ಬೆಳೆಸಿದ್ದಾರೆ ಅದನ್ನು ನಾವು ಬಹುಶಃ ಹಿಂದೆ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆದರೆ ಎಲ್ಲಿ ಅರಣ್ಯ ಬೆಳೆಸಿಲ್ಲ ಅದನ್ನು ಹೊಸದಾಗಿ ವಿೂಸಲು ಅರಣ್ಯ ಅಂತ ಹೇಳಿ ವಿಂಗಡಿಸತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ಎಲ್ಲಿಯಾದರೂ ಆಗುವ ಪ್ರಶ್ನೆ ಇದ್ದರೆ ಅದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

೪ ಗುಲ್ಬರ್ಗ ಜಿಲ್ಲಾ ಪರಿಷತ್ತಿನ ಕೃಷಿ ಇಲಾಖೆಯವರಿಗೆ ಕೇಂದ್ರ ಸರ್ಕಾರ ಬರಪರಿಹಾರಕ್ಕೆ ನೀಡಿದ ಒಂದು ಕೋಟಿ ರೂಪಾಯಿಗಳ ಅವ್ಯವಹಾರ ಮತ್ತು ಅದರಲ್ಲಿ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಗಳು ಶಾಮೀಲಾಗಿರುವ ಬಗ್ಗೆ

(ಗೊಂದಲ)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಕೃಷಿ ಇಲಾಖೆಯವರಿಗೆ ಕೇಂದ್ರ ಸರಕಾರದ ಬರ ಪರಿಹಾರದ ಬಗ್ಗೆ ಬಿಡುಗಡೆ ಮಾಡಿದ ಒಂದು ಕೋಟಿ ರೂಪಾಯಿಗಳ ಅವ್ಯವಹಾರದಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯದರ್ಶಿಗಳು ನೇರವಾಗಿ ಶಾಮೀಲಾಗಿರುವ ವಿಚಾರದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನ ಸೆಳೆಯುತ್ತೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಅಪ್ಪಣೆ ಪಡೆದು ಒಂದು ನಿಮಿಷ ವಿವರಣೆ ಕೇಳಲು ತಾವು ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ? ನಾನು ಗುಟೆಗಟ್ಟಲೆ ಸಮಯವನ್ನು ತೆಗೆದುಕೊಂಡಿಲ್ಲ, ಲಕ್ಷಾಂತರ ಎಕರೆ ಜಮೀನಿನ ಬಗ್ಗೆ ನಾನು ಮಾಹಿತಿ ಕೇಳಲು ಅವಕಾಶ ಕೇಳಿದರೆ ತಪ್ಪುಗೇಳಿಸಿಟ್ಟು ಬರುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ತಾವು ಒಂದು ನಿಮಿಷ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು.—ತಾವು ಎಷ್ಟು ನಿಮಿಷ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿದುಕೊಳ್ಳಲು ರೆಕಾರ್ಡ್ ತೆಗೆಸಿ ನೋಡಿ. ಆಮೇಲೆ ನಾನು ಸರಿಯಾಗಿ ವರ್ತಿಸಲಿಲ್ಲವೆಂದು ಹೇಳಿದರೆ ಅದನ್ನು ತಿದ್ದುಕೊಳ್ಳುವುದಕ್ಕೆ ನಾನಂ ತಯಾರಿದ್ದೇನೆ. ಹೇಳುವುದನ್ನೆಲ್ಲಾ ಹೇಳಿದ್ದೇನೆ. ಮತ್ತೆ ರಿಪಿಟಿಷನ್ ಆಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಅಪ್ಪಣೆ ಕೊಟ್ಟರೆ ಮಾತ್ರ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.—ಹೇಗೂ ಮುಂದಕ್ಕೆ ಹೋಗಿದ್ದೇನೆ. ನೀವು ಏನು ಕಳಿಸಿದ್ದೀರಿ, ಅದನ್ನೆಲ್ಲಾ ಅವರಿಗೆ ಕಳಿಸಿ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ,

ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ, ಕೃಷಿ ಉಪಕರಣಗಳು, ಗೊಬ್ಬರ ಇತ್ಯಾದಿಗಳನ್ನು ಖರೀದಿಸುವಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಸಿ.ಒ.ಡಿ.ಯವರಿಗೆ ವಹಿಸಲಾಗಿದೆ. ಸದರಿ ವಿಷಯವು ಇನ್ನೂ ಸಿ.ಒ.ಡಿ.ಯವರ ತನಿಖೆಯಲ್ಲಿಯೇ ಇರುತ್ತದೆ. ಸೆಪ್ಟೆಂಬರ್ ೧೯೮೮ರಲ್ಲಿ ಸಂಬಂಧಿಸಿದ ಪ್ರವಾಹಗಳಿಂದ ನೊಂದವರ ಪರಿಹಾರಕ್ಕಾಗಿ ಗುಲ್ಬರ್ಗಾ ಜಿಲ್ಲಾಪರಿಷತ್ತಿಗೆ ರೂ.೧೫೭.೫೦ ಲಕ್ಷಗಳನ್ನು ಮಂಜೂರು ಮಾಡಲಾಗಿತ್ತು. ಸಿ.ಒ.ಡಿ.ಯವರು ತಮ ಪತ್ರದ ದಿನಾಂಕ ೨೦-೨-೧೯೯೦ ರಲ್ಲಿ, ಈ ಕೆಳಕಂಡ ದಾಖಲೆಗಳನ್ನು ಮತ್ತು ಮಾಹಿತಿಯನ್ನು ಕೋರಿದ್ದರು.

೧) ಕೇಂದ್ರ ಅಧ್ಯಯನ ತಂಡ ಗುಲ್ಬರ್ಗಾ ಜಿಲ್ಲೆಯ ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿದಾಗ ಯಾವ ವಿಷಯಗಳನ್ನು ಚರ್ಚಿಸಿದರು ?

೨) ಕೇಂದ್ರ ಅಧ್ಯಯನತಂಡದ ಭೇಟಿಯ ಸಮಯದಲ್ಲಿ ಯಾವ ಯಾವ ಅಧಿಕಾರಿಗಳು ಮತ್ತು ಸಾರ್ವಜನಿಕ ಪ್ರತಿನಿಧಿಗಳು ಹಾಜರಿದ್ದರು ?

೩) ಗುಲ್ಬರ್ಗಾ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಲೀ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು ರವರಾಗಲೀ ಅಥವಾ ಬೇರೆ ಯಾವ ಅಧಿಕಾರಿಗಳಾಗಲೀ ಪ್ರವಾಹದಿಂದ ಉಂಟಾದ ನಷ್ಟಗಳ ಬಗ್ಗೆ ಮತ್ತು ಪರಿಹಾರಕ್ಕಾಗಿ ವರದಿಗಳನ್ನು ಕಳುಹಿಸಿರುತ್ತಾರೆಯೇ ?

೪) ಪರಿಹಾರ ಧನವು ಮೂಲತಃ ಯಾವ ರೀತಿ ಬಂತು. ಜಿಲ್ಲಾ ಪರಿಷತ್ತಿನ ಅದರಲ್ಲೂ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಯವರ ಪಾತ್ರವೇನು ? ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಿಂದ ಪರಿಹಾರಕ್ಕಾಗಿ ಯಾವುದಾದರೂ ವರದಿಗಳು ಸರ್ಕಾರಕ್ಕೆ ಬಂದಿವೆಯೇ ಮತ್ತು ಇದರ ಬಗ್ಗೆ ನಡವಳಿಕೆ ಗಳೇನಾದರೂ ಇವೆಯೇ ?

ಸಂಬಂಧಪಟ್ಟ ದಾಖಲೆಗಳನ್ನು ಮತ್ತು ಮಾಹಿತಿಯನ್ನು ಕಂದಾಯ ಇಲಾಖೆ, ಜಿಲ್ಲಾಧಿಕಾರಿ, ಗುಲ್ಬರ್ಗಾ ಮತ್ತು ಮುಖ್ಯ ಕಾರ್ಯದರ್ಶಿ, ಜಿಲ್ಲಾಪರಿಷತ್ತು, ಗುಲ್ಬರ್ಗಾರವರಿಂದ ಪಡೆದು ಸರ್ಕಾರದ ಪತ್ರವ ದಿನಾಂಕ ೨೪.೩.೧೯೯೦ರಲ್ಲಿ ಸಿ.ಒ.ಡಿ.ಯವರಿಗೆ ಒದಗಿಸಲಾಗಿದೆ.

ಆದ್ದರಿಂದ ಸದರಿ ಪ್ರಕರಣವು ಇನ್ನೂ ಸಿ.ಒ.ಡಿ.ಯವರ ತನಿಖೆಯಲ್ಲಿಯೇ ಇರುತ್ತದೆ. ಸಿ.ಒ.ಡಿ. ಯವರ ವರದಿ ಬಂದ ತಕ್ಷಣ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮವನ್ನು ನಿಯಮಗಳಂತೆ ತೆಗೆದು ಕೊಳ್ಳಲಾಗುವುದು.

ವಿ. ಸೂ.—ರೂ. ೧೫೭.೫೦ ಲಕ್ಷಗಳ ಪೈಕಿ, ರೂ. ೧೦೦.೯೦ ಲಕ್ಷವನ್ನು ಕೃಷಿ ವಿಭಾಗಕ್ಕೆ ಬಿಡುಗಡೆ ಮಾಡಲಾಗಿತ್ತು.

ಶ್ರೀ ಬಸವಂತ ರೆಡ್ಡಿ ವೇತಕಪಲ್ಲಿ.— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲಾಪರಿಷತ್ತಿನಲ್ಲಿ ಸಿಒಡಿ ವಿಚಾರಣೆಗಾಗಿ ನಿರ್ಣಯ ದಿನಾಂಕ. ೩೧-೫-೮೧ರಂದು ಆಗಿ ೧೦ ತಿಂಗಳಾದರೂ ಇನ್ನೂ ಸಿಒಡಿ ವಿಚಾರಣೆ ಪೂರ್ತಿಯಾಗಿಲ್ಲ ಏಕೆ ? ಈ ಪ್ರಕರಣದಲ್ಲಿ ನೇರವಾಗಿ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಗಳು ಶಾಮೀಲಾಗಿರುವ ಬಗ್ಗೆ ವಿವರಣೆ ಕೊಡುತ್ತೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ೮೭-೮೮ರ ಬರ ಪರಿಹಾರಕ್ಕಾಗಿ ಕೇಂದ್ರ ಸರಕಾರ ೧ ಕೋಟಿ ಮಂಜೂರು ಮಾಡಿ ೧೯೮೮-೮೯ನೇ ಸಾಲಿಗೆ ರೈತರಿಗೆ ಬಿತ್ತಳಿಕೆ ಸಾಲಿನಲ್ಲಿ ಬಿತ್ತಳಿಕೆ ಸಹಾಯಾರ್ಥವಾಗಿ ಸಣ್ಣ ರೈತರಿಗೆ ಬೀಜ, ರಸಗೊಬ್ಬರ, ಕೃಷಿ ಸಾಮಗ್ರಿ ಚೀಲಗಳನ್ನು ಮಾತ್ರ ಖರೀದಿಸಲು ವಿನಿಯೋಗಿಸತಕ್ಕದ್ದು ಎಂದು ಒಂದು ಆದೇಶವನ್ನು ನಿರ್ದೇಶಕರ ಕಾರ್ಯಾಲಯ, ಬೆಂಗಳೂರು, ದೂರವಾಣಿ ಸಂಖ್ಯೆ ೭೪೮೩ ತಿಳಿಸಿದ ನಂತರ ಒಂದು ಆದೇಶ ಪತ್ರವನ್ನು

ದಿನಾಂಕ ೧೪-೨-೯೯ರ ಪತ್ರ ಸಂಖ್ಯೆ ಸಿಬಿಎ ೨೯ ಆರ್‌ಡಿಆರ್ ೯೯-೯೯ರಲ್ಲಿ ಆದೇಶ ಪತ್ರವನ್ನು ವ್ಯವಸ್ಥಾಪಕ ಕೃಷಿ ಸುಲ್ಬರ್ಗ ಇವರಿಗೆ ಕಳಿಸಿದ್ದಾರೆ, ಇದರ ಪ್ರತಿಯನ್ನು ಜಿಲ್ಲಾ ಪರಿಷತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕೂಡ ಕಳಿಸಿದ್ದಾರೆ. ಈ ಆದೇಶದಲ್ಲಿ ಕ್ರಮ ಸಂಖ್ಯೆ ೯ರಲ್ಲಿ ಬಹಳ ಸ್ಪಷ್ಟವಾಗಿದೆ. ಆದ್ದರಿಂದ ನಾನು ಈ ಆದೇಶವನ್ನು ತಮ್ಮ ದಾಖಲೆಗಾಗಿ ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು.— ಈ ಪ್ರಕರಣವನ್ನು ಸಿ.ಐ.ಡಿ.ಗೆ ಒಪ್ಪಿಸಲಾಗಿದೆ. ಅವರು ವಿಚಾರಣೆಯನ್ನು ನಡೆಸುತ್ತಿದ್ದಾರೆ ಎಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.— ಮಾನ್ಯ ಅಧ್ಯಕ್ಷರೇ, ಈ ವ್ಯವಹಾರದಲ್ಲಿ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಯವರು ನೇರವಾಗಿ ಶಾಮೀಲಾಗಿದ್ದಾರೆಂದು ಸಿ.ಐ.ಡಿ. ತನಿಖೆಯಿಂದ ಬಹಿರಂಗವಾಗಿದೆ. ಆದ್ದರಿಂದ ಅವರ ಮೇಲೆ ಸರ್ಕಾರದವರು ಬಿಚ್ಚಿಕೆ ಕ್ರಮ ತೆಗೆದುಕೊಳ್ಳಬಾರದೆಂದು ನಾನು ಸರ್ಕಾರದಿಂದ ಸ್ಪಷ್ಟೀಕರಣವನ್ನು ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿದಂತೆ ಆ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಯವರ ವಿರುದ್ಧ ದೂರುಗಳಿವೆ. ಇದರ ಬಗ್ಗೆ ದೂರುಗಳು ಬಂದಮೇಲೆ ಸಿ.ಐ.ಡಿ.ಯವರು ತನಿಖೆ ನಡೆಸುತ್ತಿದ್ದಾರೆ. ೧೫೬.೩೦ ಲಕ್ಷ ರೂಪಾಯಿಗಳಷ್ಟು ಅವ್ಯವಹಾರವಾಗಿದೆ ಎಂದು ತಿಳಿದು ಬಂದಿದೆ. ಅವರು ಜಿಲ್ಲಾ ಪರಿಷತ್ತಿನ ನಿರ್ಣಯದ ಪ್ರಕಾರ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗಿದೆ. ಆದರೆ ಜಿಲ್ಲಾ ಪರಿಷತ್ತಿನ ನಿರ್ಣಯದಂತೆ ಮಾಡಿಲ್ಲವೆಂದು ಇವರು ಹೇಳುತ್ತಿದ್ದಾರೆ. ಸಿ.ಐ.ಡಿ. ವರದಿ ಬಂದಕೂಡಲೇ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾರ.— ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯು ಬರ ಪರಿಹಾರ ಕಾರ್ಯಕ್ರಮದ ಬಗ್ಗೆ ಕೇಂದ್ರಸರ್ಕಾರದಿಂದ ಬಿಡುಗಡೆಯಾದ ೧ ಕೋಟಿ ರೂ. ಹಣವನ್ನು ವಿಚರ್ತು ಮಾಡುವಾಗ ಸರ್ಕಾರದ ಆದೇಶವಿದ್ದರೂ ಕೂಡ ಜಿಲ್ಲಾಪರಿಷತ್ತಿನವರು ಬೀಜ ಮತ್ತು ಗೊಬ್ಬರವನ್ನು ಖರೀದಿ ಮಾಡತಕ್ಕದನ್ನು ಹೊರತುಪಡಿಸಿ ತಮಗೆ ಬೇಕಾದದ್ದನ್ನು, ಬೇಕಾದ ರೀತಿಯಲ್ಲಿ ಕೊಂಡು ತಂದಿದ್ದಾರೆ. ಎರಡು ರೂಪಾಯಿಗೆ ತರುವಿದ್ದನ್ನು ೨೦ ರೂ. ಗೆ ಮಾರಾಟ ಮಾಡಿದ್ದಾರೆ. ಇಂತಹ ಅನೇಕ ಉದಾಹರಣೆಗಳಿವೆ. ಜಿಲ್ಲಾ ಪರಿಷತ್ತಿನಲ್ಲಿ ಏನು ನಿರ್ಣಯವಾಯಿತು ಅದರ ಪ್ರಕಾರ ಈ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಯವರು ನಡೆದುಕೊಂಡಿಲ್ಲ, ತಮಗೆ ಬೇಕಾದ್ದನ್ನು ಖರೀದಿ ಮಾಡಿ ಬಹಳಷ್ಟು ಅನ್ಯವಹಾರವನ್ನು ಮಾಡಿದ್ದಾರೆ. ಇವರ ಬಗ್ಗೆ ಸಿ.ಐ.ಡಿ. ತನಿಖೆಯಾಗಿ ಇವರಿಗೆ ಶಿಕ್ಷೆಯಾಗಬೇಕು.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಎಂದರೆ, ಇವರು ಖರೀದಿಯನ್ನು ಮಾಡಿರತಕ್ಕ ಗೊಬ್ಬರ ಎಂದರೆ ಮಲ್ಟಿಮಿನ್ ಗೊಬ್ಬರವಂತೆ. ನಮ್ಮ ಜನರ ಅಭಿಪ್ರಾಯ ಈ ಗೊಬ್ಬರದ ಬಗ್ಗೆ ಏನೆಂದರೆ, ಬೆಂಗಳೂರಿನಲ್ಲಿರತಕ್ಕ ಮಣ್ಣನ್ನು ಇವರು ತಂದು ನಮಗೆ ಗೊಬ್ಬರ ಎಂದು ನಾಮಕರಣ ಮಾಡುತ್ತಿದ್ದಾರೆ ಎಂದು. ಏಕೆಂದರೆ ಇದು ಗೊಬ್ಬರದ ರೀತಿ ಇಲ್ಲವೇ ಇಲ್ಲ. ಇದು ಒಂದು ರೀತಿಯ ಮಣ್ಣು ಸಂಶಿಪ. ಅದೂ ಇಲ್ಲದೆ ಈ ಮಲ್ಟಿಮಿನ್ ಗೊಬ್ಬರವನ್ನು ಯಾವ ಫ್ಯಾಕ್ಟರಿಯಲ್ಲಿ ತಯಾರಿ ಮಾಡುತ್ತಾರೆಂದು ಹೇಳುತ್ತಾರೋ ಆ ಹೆಸರಿನ ಫ್ಯಾಕ್ಟರಿಯೂ ಕೂಡ ಇಲ್ಲವಂತೆ. ಈ ರೀತಿ ಫ್ಯಾಕ್ಟರಿ ಇಲ್ಲದಿದ್ದರೂ ಆ ಫ್ಯಾಕ್ಟರಿಯಲ್ಲಿ ತಯಾರಾದುದು ಎಂದು ಗೊಬ್ಬರವನ್ನು ತಂದಿದ್ದಾರೆ. ಅದು ಬೆಂಗಳೂರಿನಲ್ಲಿರುವ ಮಣ್ಣಿನಂತೆ ಇದೆ. ಈ ರೀತಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಯವರು ಲಕ್ಷಾಂತರ ರೂಪಾಯಿ ಅವ್ಯವಹಾರ ಮಾಡಿ ನಮ್ಮ ರೈತರಿಗೆ ಮೋಸ ಮಾಡುತ್ತಿದ್ದಾರೆ. ಆದ್ದರಿಂದ ನಾನಾದರೂ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಅವರು ಖರೀದಿ ಮಾಡಿರತಕ್ಕ ಗೊಬ್ಬರ ಪೌಡೋ, ಅಲ್ಲವೋ ಎಂಬುದನ್ನು ಸಭೆಗೆ ತಿಳಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ನನ್ನ ಗಮನದಲ್ಲಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕೇವಲ ಇದೊಂದೇ ದೂರು ಅಲ್ಲ. ಇನ್ನೂ ಬಂದು ಪ್ರಕರಣ ಇದೇ ರೀತಿಯಾದ್ದು ಇದೆ. ಅದನ್ನೂ ಕೂಡ ನಾವು ತನಿಖೆ ಮಾಡಿಸುತ್ತೇವೆಂದು ಹೇಳಿ ಬಯಸುತ್ತೇನೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಯಾರು ಶಿಫಾರಸ್ಸು ಮಾಡಿದ್ದಾರೆ, ಅವರನ್ನು ಈ ಸರ್ಕಾರದವರು ಬಿಡುಗಡೆ ಮಾಡುತ್ತಾರೆಂಬ ಕಪ್ಪು ಕಲ್ಪನೆ ಮಾನ್ಯ ಸದಸ್ಯರಲ್ಲಿ ಬೇಡ. ಸಿ.ಐ.ಡಿ. ರಿಪೋರ್ಟ್ ಬಂದ ಕೂಡಲೇ ಮಾನ್ಯಸದಸ್ಯರಿಗೆ ತಿಳಿಸುತ್ತೇನೆ ಮತ್ತು ಅದರ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ತಮ್ಮ ಮೂಲಕ ಅವರಿಗೆ ಕೊಡಬಯಸುತ್ತೇನೆ.

ರೆಸಲ್ಯೂಷನ್ ಬಿ. ಎಂ.

ಶ್ರೀ ಶಿವಶಂಕರಪ್ಪಗೌಡ ಶಿರವಾರ್.—ಮಾನ್ಯ ಅಧ್ಯಕ್ಷರೇ ನಮಗೆ ಏನು ಭಾವನೆ ಇದೆ ಅಂದರೆ ಇವತ್ತು ಸಿ.ಓ.ಡಿ. ರಿಪೋರ್ಟ್ ತಯಾರಾಗಿದೆ, ಆದರೆ ಐ. ಎ. ಎಸ್. ಅಧಿಕಾರಿಗಳು ಈ ವರ್ಗದಲ್ಲಿ ಸಿಕ್ಕಿದ್ದಾರೆ ಏನ್ನುವ ಭಾವನೆಯಿಂದ ಪುನರ್ ಪರಿಶೀಲನೆ ಮಾಡುತ್ತಿದ್ದಾರೆ ಎನ್ನುವ ಭಾವನೆ ಇದೆ. ಅದಕ್ಕಾಗಿ ಏನು ಹೇಳುತ್ತಿದ್ದೇನೆಂದರೆ ವರದಿ ತಯಾರಾಗಿದ್ದರೂ ಅದನ್ನು ಪರಿಶೀಲನೆ ಮಾಡ ಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆಗಬಹುದು.

ಅಧ್ಯಕ್ಷರು.—ಈಗ ಬಿಳಿನೀ ನಿಯಮಗಳ ಮೇರೆಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಕ್ವಶ್ಚನ್ ಅವರ್ ಮುಗಿಯಿತು.

ಶ್ರೀ ಪಾಟೀಲ್ ಸಾಗರಾಜ್ —ಮಾನ್ಯ ಅಧ್ಯಕ್ಷರೇ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಬೆಳಗಾವಿಯ...

ಅಧ್ಯಕ್ಷರು.—ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹೆಸರನ್ನು ಮೊದಲು ಕರೆದಿದ್ದೆ. ಅವರ ಹೆಸರಿಗಿಂತ ಮೊದಲು ಶಿವಶಂಕರಪ್ಪ ಗೌಡರ ಹೆಸರು ಇತ್ತು. ಆದ್ದರಿಂದ ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಹೇಳಿಕೆ ಕೊಟ್ಟಂತೆ ಇಲ್ಲಿ ಸಿ.ಓ.ಡಿ.ಗೆ ಏನು ರೆಫರ್ ಆಗಿಲ್ಲ. ಸಿ.ಓ.ಡಿ.ಗೆ ರೆಫರ್ ಆದಮೇಲೆ ತನಿಖೆಯನ್ನು ನಿಲ್ಲಿಸಬೇಕು ಎನ್ನುವ ವಿಚಾರ ಹೊಗೆ ಬಂದಿದೆ. ಆದ್ದರಿಂದ ದಯವಿಟ್ಟು ಸಿ.ಓ.ಡಿ. ಎನ್‌ಕ್ವೈರಿ ರಿಪೋರ್ಟ್ ಏನಾ ಇದೆ, ಅದನ್ನು ಈ ಸದನದಲ್ಲಿ ನೀವು ಒಪ್ಪಿಸುತ್ತೀರಾ, ಟೇಬಲ್ ಮೇಲೆ ಇಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ.—ಅಧ್ಯಕ್ಷರೇ, ಇದು ಪ್ರೈವೇಟಾವಾಗಿದ್ದು ಉಂಟು. ಇಂಥ ಒಂದು ದೊಡ್ಡ ವ್ಯವಹಾರ ಡೆಪ್ಯೂಟಿ ಸೆಕ್ರೆಟರಿಯವರು ತನಿಖೆ ಮಾಡುತ್ತಾರೆಂದು ಹೇಳಿಬಿಟ್ಟು ಜಿಲ್ಲಾ ಪರಿಷತ್‌ನವರು ಒಪ್ಪತಕ್ಕಂಥ ಪ್ರಯತ್ನ ನಡೆದಿದೆ. ಆದರೆ ಸಿ.ಓ.ಡಿ. ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಇದರಲ್ಲಿ ಯಾರೇ ಇರಲಿ ತಪ್ಪು ಮಾಡಿದವರನ್ನು ಬಿಡತಕ್ಕಂಥ ಪ್ರಯತ್ನವಿಲ್ಲ. ಇದು ಮುಂದೆ ಸದನದಲ್ಲಿ ಬರತಕ್ಕಂಥದ್ದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಎನ್‌ಕ್ವೈರಿ ಮಾಡಿ ರಿಕಮ್ಮೆಂಡೇಷನ್ ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದು ಎನ್‌ಕ್ವೈರಿ ಆಗಬೇಕೆಂದು ಎಂಪ್ಲೈರ್ ಜಿಲ್ಲಾ ಪರಿಷತ್ತಿನಲ್ಲಿ ರೆಸಲ್ಯೂಷನ್ ಆಗಿದೆ. They have passed a Resolution unanimously condemning the misappropriation. ಅದಕ್ಕೆ ದಯವಿಟ್ಟು ಸಿ. ಓ. ಡಿ. ಎನ್‌ಕ್ವೈರಿ ಮಾಡಿಸಿ ಸದನದ ಮುಂದೆ ಇರುವುದು ಒಂದು. ಡೆಪ್ಯೂಟಿ ಸೆಕ್ರೆಟರಿಯವರು ಕೊಟ್ಟಿರತಕ್ಕಂಥದ್ದು ಪಿ.ಡಬ್ಲ್ಯೂ.ಡಿ.ನಲ್ಲಿ ಮಿಸ್ ಆಪ್ರೋಪ್ರಿಯೇಷನ್ ಆಗಿರುವುದರ ಬಗ್ಗೆ ಈ ಆಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಪರ್ಚೇಸ್ ಮಾಡಿದ್ದಾರಲ್ಲ, ಅದರ ಬಗ್ಗೆ ಕೊಟ್ಟಿಲ್ಲ. ಅದರ ಬಗ್ಗೆ ಸಿ. ಓ. ಡಿ. ಎನ್‌ಕ್ವೈರಿ ಈಗಾಗಲೇ ಆಯ್ತು ಜಾರಿಯಲ್ಲಿದೆ. ಇನ್ನೊಂದು ಸಾರಿ ಇನ್‌ಪರ್ಮೇಷನ್ ತರಿಸಿಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅವರು ಇರಲಿಲ್ಲ. ಪರಿಸ್ಥಿತಿ ಏನಿದೆ ಎಂದರೆ, ಈ ಕೋಟಿ ರೂಪಾಯಿಗಳ ಅವ್ಯವಹಾರ ಎರಡು ರೀತಿಯಲ್ಲಿದೆ. ಇದು ಒಂದನೇಯದು, ಎರಡನೇಯದು ಈ ರೀತಿ ತನಿಖೆ ಪ್ರಾರಂಭಿಸಿಬಿಟ್ಟು ಮುಚ್ಚತಕ್ಕಂಥದ್ದು ಏನಿದೆ, ಅದರ ಸತ್ಯಾಂಶ ಹೊರಗೆಡಸಲಿಕ್ಕೆ ಪ್ರಯತ್ನ ನಡೆದಿದೆ.

ಶ್ರೀ ಬಸವಂತರಡ್ಡಿ ಪೊತಕಪಲ್ಲಿ —ವರದಿ ತಯಾರಾಗಿದ್ದರೂ ಅದನ್ನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನ ಮಾಡಿಲ್ಲ ಎಂಬ ಭಾವನೆ ನಮಗೆ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಹಾಗೇನಿಲ್ಲ. ಎಲ್ಲ ಸರಿಮಾಡುತ್ತಿದ್ದಾರೆ.